	CONDUCTORS: 1984-85		1985 to 30th June, 1986	
1.	Bellary Division	240	Ballsry Division	126
2.	Gulbarga Division	134	Hubli Division	339
3.	Mysore Division	85	Gulbarga Division	308
4.	N. K. Division	84	Hassan Division	57
5.	Raichur Division	90	Mysore Division	76
6.	N.K. Division	84	Bangalore Division	200
7.	Mangalore Division	200	Raichur Division	25
			Hassan Division	22
			Belgaum Division	192
			Bellary Division	140
	Total :	917	Total :	1485
B.T.S. Division		NIL	B.T.S Division	900

ರಾಜ್ಯದಲ್ಲಿನ ಕೋಮು ಗಲಭೆಯ ಬಗ್ಗೆ

೪೭ (೨೩೪) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್‌ಕಲ್). ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ೧೯೮೫–೮೬ ಮತ್ತು ೧೯೮೬–೮೭ರಲ್ಲಿ ನಡೆದ ಒಟ್ಟು ಕೋಮು ಗಲಭೆ ಗಳೆಷ್ಟು ?

ಆ) ಅಂತಹ ಗಲಭೆಗಳಿಗೆ ಕಾರಣಗಳೇನು ?

ಇ) ಅಂತಹ ಗಲಭೆಗಳನ್ನು ತಡೆಯಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ೧೯೮೫–೮೬ರಲ್ಲಿ ೧೨ ಸಣ್ಣ ಪ್ರಮಾಣದ ಮತೀಯ ಗಲಭೆಗಳೂ, ೧೯೮೬–೮೭ ರಲ್ಲಿ ೧ ದೊಡ್ಡ ಪ್ರಮಾಣದ ಹಾಗೂ ೪ ಸಣ್ಣ ಪ್ರಮಾಣದ ಮತೀಯ ಗಲಭೆಗಳೂ ರಾಜ್ಯದಲ್ಲಿ ಸಂಭವಿಸಿವೆ.

ಆ) ೧೯೮೫–೮೬ರಲ್ಲಿ

೧) ಬೆಳಗಾವಿಯಲ್ಲಿ ಮುಸ್ಲಿಂ ಯುವಕನಿಗೆ ಇರಿತ (೨) ಹುಬ್ಬಳ್ಳಿಯಲ್ಲಿ ಆಟೋ ದರದ ಬಗ್ಗೆ ಆಟೋದ ಹಿಂದು ಪ್ರಯಾಣಿಕನಿಗೂ ಮುಸ್ಲಿಂ ಆಟೋ ಚಾಲಕನಿಗೂ ನಡೆದ ಬಿಸಿ ಪಾಗ್ಯುದ್ಧ (೩) ನೆಲಮಂಗಲದ ವಕ್ಫ್ ಮಂಡಳಿಗೆ ಸಂಬಂಧಿಸಿದ ಜಮೀನಿನ ವಿವಾದದಿಂದ, (೪) ಸವನೂರಿನಲ್ಲಿ ಮುಸ್ಲಿಂ ಯುವಕನಿಂದ ಹಿಂದು ಯುವತಿಯ ಚುಡಾಯಿಸುವಿಕೆ (೫) ರಾಣೆಬೆನ್ನೂರಿನಲ್ಲಿ ಗಣೇಶ ಪ್ರತಿಮೆಯ ಮೆರವಣಿಗೆ ನಡೆದಾಗ ಮೆರವಣಿಗೆಯ ಮೇಲೆ ದುಷ್ಕರ್ಮಿಗಳಿಂದ ಕಲ್ಲೆಸೆತ (೬) ಬಂಕಾಪುರದಲ್ಲಿ ಮುಸೀದಿಯ ಎದುರು ದಸರಾ ಮೆರವಣಿಗೆ ನಡೆಸಿದ್ದುದರ ವಿರುದ್ಧ ಮುಸ್ಲಿಮರ ಆಕ್ಷೇಪ (೭) ರಾಣೆಬೆನ್ನೂರಿನಲ್ಲಿ ಕಟ್ಟೆಯ ಬಗ್ಗೆ ಹಿಂದೂ ಮುಸ್ಲಿಮರ ಮಧ್ಯೆ ಇದ್ದ ದೀರ್ಘಕಾಲಿಕ ವಿವಾದ (೮) ಗೋಕಾಕದಲ್ಲಿ ಮಸೀದಿಯ ಪಕ್ಕದಲ್ಲಿ ಹಿಂದು ಯುವಕನಿಂದ ಮೂತ್ರ ವಿಸರ್ಜನೆ (೯) ಬೇಲೂರಿನಲ್ಲಿ ಹಿಂದು ಯುವಕರಿಂದ ಮುಸ್ಲಿಮರ ವಿರುದ್ಧ ದುರ್ನಡತೆ (೧೦) ಚಿಕ್ಕೆರೂರಿನಲ್ಲಿ ಹಿಂದು ಯುವತಿಯನ್ನು ಮುಸ್ಲಿಮರು ಚುಡಾಯಿಸುವಿಕೆ (೧೧) ಬಾಗಲಕೋಟೆಯಲ್ಲಿ ಹೋಲಿ ಮೆರವಣಿಗೆಯ ಮೇಲೆ ಕಿಡಿಗೇಡಿಗಳಿಂದ ಕಲ್ಲೆಸತ ಮುಂತಾದವು.

೧೯೮೬-೮೭ರಲ್ಲಿ

೧೨) ವೀರಾಜಪೇಟೆಯಲ್ಲಿ ಮುಸ್ಲಿಮರಿಂದ ಹಿಂದು ಯುವತಿಯ ಚುಡಾಯಿಸುವಿಕೆ (೧೩) ವಿರಾಜಪೇಟೆಯಲ್ಲಿ ಕೇರಳ ಮುಸ್ಲಿಮರಿಂದ ಆರಣ್ಯ ಮತ್ತು ಸರ್ಕಾರಿ ಜಮೀನಿನ ಆಕ್ರಮಣ (೧೪) ಬಾಗಲಕೋಟೆಯಲ್ಲಿ ಮಧ್ಯಪಾನದ ಪ್ರಭಾವದಿಂದ ಹಿಂದು ಮುಸ್ಲಿಮರ ನಡುವೆ ಜಗಳ (೧೫) ಮಡಕೇರಿಯಲ್ಲಿ ಹಿಂದು ವ್ಯಕ್ತಿಯನ್ನು ಮುಸ್ಲಿಮನಿಂದ ಇರಿತ (೧೬) ಅಲಂದದಲ್ಲಿ ಕಾರ ಹುಣ್ಣಿಮೆಯ ಸಂದರ್ಭದಲ್ಲಿ ಸಿಡಿದ ಎತ್ತಿನ ಗಾಡಿಯ ಮೆರವಣಿಗೆಯಲ್ಲಿ ಎರಡೂ ಗುಂಪುಗಳ ಮಧ್ಯ ಉಂಟಾದ ಸ್ಪರ್ಧೆ ಮತ್ತು (೧೭) ರಾಮನಗರದಲ್ಲಿ ಕರಗ ಮೆರವಣಿಗೆಯ ಮೇಲೆ ದುಷ್ಕರ್ಮಿಗಳಿಂದ ಕಲ್ಲೆಸೆತ.

೧) ೧. ಐ.ಪಿ.ಸಿ ಸೆಕ್ಷನಿನನ್ವಯ ಆರೋಪಿತರ ವಿರುದ್ಧ ಕೇಸು ದಾಖಲು ಮಾಡಿ, ಆರೋಪಿತರನ್ನು ಬಂಧಿಸಿ, ಗಲಭೆ ಬೆಳೆಯುವುದನ್ನು ಪೋಲೀಸು ತಡೆದಿದ್ದಾರೆ.

೨. ಶಾಂತಿ ಸಮಿತಿ ಸಭೆ ನಡೆಸಿ, ಪ್ರಭಾವಿ ಮತ್ತು ಎರಡೂ ಗುಂಪುಗಳ ನಾಯಕರನ್ನು ಸಂಪರ್ಕಿಸಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಕೇಳಿಕೊಳ್ಳಲಾಗಿದೆ.

೩. ಸಚಿವರು, ಸ್ಥಳೀಯ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಗಲಭೆಯಿಂದ ತೊಂದರೆಗೊಳಗಾದ ಸಂತ್ರಸ್ತರಿಗೆ ಸೂಕ್ತ ಪರಿಹಾರ ಮಂಜೂರು ಮಾಡುವ ಆಶ್ವಾಸನೆ ಇತ್ತಿರುವರು. ಗಲಭೆಯಲ್ಲಿ ನೋದವರಿಗೆ ಸರ್ಕಾರವು ಸೂಕ್ತ ಪರಿಹಾರ ಮಂಜೂರು ಮಾಡುತ್ತಿದೆ.

State Press Academy

48 (75) Smt. MUKHTHAR UNNISA (Narasimharaja).—Will the Chief Minister be pleased to state:—

a) When did the State Press Academy come into existence ?

b) The names of the office bearers and their emoluments?

c) Objectives of the Academy?

d) whether any journalists were given any award or fellowships so far?

e) If so, the number and Names af jornalists ?

SRI. RAMAKRISHNA HEGDE (Chief Minister).—

a) It came into existence during January 1982 and was reconstituted in December 1983.

b) The following are the Chairman and Members of the Sriyuths:

1.	Khadri Shamanna	Chairman
2.	Shanmugam	Member
3.	B. Narasimha	-do-
4.	Ramamurthy	-do-
5.	S.M. Sagar	-do-
6.	T. Nagaraju	-do-
7.	Ali Hafeez	-do-
8.	K. Sridharacher	-do-
9.	A. Rangaiah	-do-